**ಪಿ.ಡಬ್ಲ್ಯು-01**

**<u>ಸಾಕ್ಷಿಯನ್ನು ದಿನಾಂಕಃ 19.10.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಟಿ.ಆರ್.ಎಂ. ವಕೀಲರಿಂದಃ</u>**

ಮಾರ್ಚಳ್ಳಿ ಗ್ರಾಮದಲ್ಲಿ ನನಗೆ ಮತ್ತು ನನ್ನ ಪತ್ನಿಯ ಹೆಸರಿಗೆ ಸುಮಾರು 10 ಎಕರೆ 20 ಗುಂಟೆ ಜಮೀನು ಇರುತ್ತದೆ. 1 ನೇ ಪ್ರತಿವಾದಿ ರವಿಕುಮಾರ್ ನಮಗೆ ಸೇರಿದ 02 ಎಕರೆ ಜಮೀನನ್ನು ಗುತ್ತಿಗೆಗೆ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ನಾವು ಗುತ್ತಿಗೆಗೆ ಕೊಟ್ಟಿರಲಿಲ್ಲ ಬದಲಾಗಿ ವರ್ಷಕ್ಕೆ ಇಷ್ಟು ಎಂದು ಹಣಕ್ಕಾಗಿ ಕೊಟ್ಟಿದ್ದೆವು ಎಂದು ನುಡಿಯುತ್ತಾರೆ. ಸುಮಾರು 04 ವರ್ಷಗಳ ಕಾಲ ವರ್ಷಕ್ಕೆ ಇಂತಿಷ್ಟು ಹಣ ಕೊಡಬೇಕೆಂದು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಗೆ ನಾನು ಅವರ ಕಷ್ಟಕ್ಕೆ ಹಂತ-ಹಂತವಾಗಿ ರೂ. 1,00,000/- ಹಣ ಕೊಟ್ಟಿರುತ್ತೇನೆಂದರೆ ಸರಿ. ನಾನು ಕೊಟ್ಟ ಹಣಕ್ಕೆ 1 ನೇ ಪ್ರತಿವಾದಿಯಿಂದ ಆಧಾರ ಪತ್ರ ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ರೂ. 1,00,000/- ಹಣದ ಭದ್ರತೆಗಾಗಿ ಆಧಾರ ಪತ್ರ ಮಾಡಿಕೊಳ್ಳೋಣ ಎಂದು 1 ನೇ ಪ್ರತಿವಾದಿಯನ್ನು ಉಪ-ನೋಂದಣಾಧಿಕಾರಿ ಕಛೇರಿಗೆ ಕರೆದುಕೊಂಡು ಹೋಗಿದ್ದೆ ಎಂದರೆ ಸರಿಯಲ್ಲ. ನಾನು ನೀರಾವರಿ ಇಲಾಖೆಯಲ್ಲಿ ಸರ್ಕಾರಿ ಅಭಿಯಂತರನಾಗಿ ಕೆಲಸ ಮಾಡಿ ನಿವೃತ್ತಿ ಹೊಂದಿರುತ್ತೇನೆ. ನಾನು ವಾರ್ಷಿಕ ಆಧಾಯ ತೆರಿಗೆ ಕಟ್ಟುತ್ತೇನೆಂದರೆ ಸರಿ. ರೂ. 50,000/- ಕ್ಕಿಂತ ಹೆಚ್ಚು ಹಣದ ಮೇಲೆ ಚೆಕ್ ಅಥವಾ ಅಕೌಂಟ್ ಮೂಲಕ ಹಣದ ವ್ಯವಹಾರ ಮಾಡಬೇಕೆಂದರೆ ಸರಿ. ಜಮೀನಿನ ಸರ್ಕಾರಿ ಮತ್ತು ಮಾರುಕಟ್ಟೆಯ ಬೆಲೆ ಬೇರೆ-ಬೇರೆ ಇರುತ್ತದೆಂದರೆ ಸರಿ. 2022 ನೇ ಸಾಲಿನಲ್ಲಿ ಮಾರ್ಚಳ್ಳಿ ಗ್ರಾಮದಲ್ಲಿ 01 ಎಕರೆ ಜಮೀನಿಗೆ ರೂ. 60,00,000/- ರಿಂದ ರೂ. 70,00,000/- ಬೆಲೆ ಬಾಳುತ್ತದೆಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಚೆಕ್ಕುಬಂದಿ ಷೆಡ್ಯೂಲ್ ನಲ್ಲಿ ನಮೂದು ಮಾಡಿರುವ 35 ಗುಂಟೆಗೆ ಇರುತ್ತದೆಂದರೆ

ಸಾಕ್ಷಿಯು 09 ಗುಂಟೆಗೆ ಇರುತ್ತದೆಂದು ನುಡಿಯುತ್ತಾರೆ. ಮುಂದುವರಿದ ಕ್ರಯ ಕರಾರು ಪತ್ರದಲ್ಲಿ ನಿ.ಪಿ.-2 ರಲ್ಲಿ 2 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆಂದರೆ ಸಾಕ್ಷಿಯು ಇಲ್ಲವೆಂದು ನುಡಿಯುತ್ತಾರೆ. ನಿ.ಪಿ.-2 ರಲ್ಲಿ ಯಾವುದೇ ಸಾಕ್ಷಿದಾರರು ಇಲ್ಲವೆಂದರೆ ಸರಿ. 1 ರಿಂದ 5 ನೇ ಪ್ರತಿವಾದಿಗಳು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ಕ್ರಯದ ಕರಾರು ಪತ್ರ ಮಾಡಿಕೊಟ್ಟಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿಗಳು ರೂ. 1,00,000/- ಹಣದ ಭದ್ರತೆಗಾಗಿ ಆಧಾರ ಪತ್ರ ಮಾಡಿಕೊಳ್ಳೋಣವೆಂದು ಉಪ-ನೋಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋಗಿ ಆಧಾರ ಪತ್ರ ಮಾಡಿಕೊಳ್ಳುವ ಬದಲು ಕ್ರಯದ ಕರಾರು ಪತ್ರ ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅವಿದ್ಯಾವಂತ ಇರುತ್ತಾರೆಂದರೆ ಅವಿದ್ಯಾವಂತ ಇರಬಹುದು ಆದರೆ ವ್ಯವಹಾರವಂತ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ 02 ಎಕರೆ ಜಮೀನು ಇದ್ದು, ಅವರು ವ್ಯವಸಾಯವನ್ನೇ ನಂಬಿ ಬದುಕುತ್ತಿದ್ದಾರೆಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶ ಪ್ರತಿವಾದಿಗಳಿಗೆ ಇರುವುದಿಲ್ಲವೆಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**